# ಬೆಟ್ಟ ಕಳೆದುಹೋದಾಗ!



ವಾಸುದೇವ ಶರ್ಮಾ ಎನ್.ವಿ.

ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟ ಅನಿತಾಗೆ ಮೈಸೂರಿಗೆ ಹೋಗುವುದೆಂದರೆ ಬಹಳ ಇಷ್ಟ. ಅದರಲ್ಲೂ ತನ್ನ ಚಿಕ್ಕಮ್ಮ ಅರುಣಾಳ ಜೊತೆ ಮಾತಾಡುವುದು, ಓಡಾಡುವುದು ಎಂದರೆ ಇನ್ನೂ ಮಜಾ.

ಚಿಕ್ಕಮ್ಮ ಅರುಣಾ ಮತ್ತು ಅಜ್ಜಿ-ತಾತ ಮೈಸೂರಿನಲ್ಲಿ ಕಾರಂಜಿ ಕೆರೆಯ ಹತ್ತಿರ ಒಂದು ತೋಟದ ಮನೆಯಲ್ಲಿ ವಾಸಿಸುತ್ತಿದ್ದರು. ಅನಿತಾಗೆ ತೋಟ, ಅಲ್ಲಿಂದ ಕಾಣುವ ಚಾಮುಂಡಿ ಬೆಟ್ಟ, ಬಂಡೆಗಳು, ಮರಗಳು, ದೇವಸ್ಥಾನ, ಟೆಲಿಫೋನ್ ಪ್ರಸಾರದ ಟವರ್, ಅರಮನೆಯ ದೃಶ್ಯವಂತೂ ಅಚ್ಚುಮೆಚ್ಚು. ಅದಕ್ಕೆ, ಒಂದೆರೆಡು ದಿನ ಬಿಡುವು ಸಿಕ್ಕರೂ ಅವಳು ಮೈಸೂರಿಗೆ ಹೊರಟು ನಿಲ್ಲುತ್ತಿದ್ದಳು.

ಮಗು ಅನಿತಾಳನ್ನು ಜೊತೆಗೆ ಹಾಕಿಕೊಳ್ಳುವುದೆಂದರೆ ಏನು ಸಾಮಾನ್ಯವೆ? ಅನಿತಾಳ ನೂರಾರು ಪ್ರಶ್ನೆಗಳಿಗೆ ಉತ್ತರಿಸಬೇಕು, ಅವಳು ಹೇಳಿದ್ದನ್ನೆಲ್ಲಾ ಕೇಳಬೇಕು. ಪ್ರತಿಕ್ರಿಯಿಸಬೇಕು.

ಕಾಲೇಜಿಗೆ ಹೋಗುತ್ತಿದ್ದ ಅರುಣಾ ಚಿಕ್ಕಮ್ಮನಿಗೆ ಅನಿತಾಳ ಮಾತು, ಪ್ರಶ್ನೆಗಳೆಂದರೆ ತುಂಬಾ ಇಷ್ಟ. 'ಅರುಣಾ ಚಿಕ್ಕಮ್ಮ, ಇರುವೆಗಳು ಸಾಲಾಗಿ ಹೋಗೋದ್ಯಾಕೆ? ಅವು ಗೂಡೊಳಗೆ ಹೋಗಿ ಏನು ಮಾಡ್ತಿರುತ್ವೆ? ಕೋತಿಗೆ ಬಾಲ ಯಾಕೆ ಬೇಕು? ಈಗ ಯಾಕೆ ಕತ್ತಲೆಯಾಗಿದೆ? ಹಾಲು ಏಕೆ ಬೆಳ್ಳಗಿದೆ? ಕಿಚಿಕಿಚಿ ಅಂತಾ ಪಕ್ಷಿಗಳು ಏನದು ಹೇಳೋದು? ಇಲ್ಲಿ ಬರೋ ನವಿಲುಗಳ್ನ ನಮ್ಮೂರಿಗೆ ಕರೆದುಕೊಂಡು ಹೋಗಬಹುದಾ? ನಮ್ಮೂರಲ್ಲಿ ಯಾಕೆ ಚಾಮುಂಡಿ ಬೆಟ್ಟ ಇಲ್ಲ? ನಮ್ಮೂರಲ್ಲೂ ನಾವು ಬೆಟ್ಟ ಮಾಡಬಹುದಾ?'

ಈ ಪ್ರಶ್ನೆಗಳನ್ನ ಕೇಳೀ ಕೇಳೀ ಅನಿತಾಳ ಅಮ್ಮ ಆಗಾಗ ಹೇಳುತ್ತಿದ್ದುದು, 'ಸಾಕು ಸಾಕು! ಇನ್ನೊಂದು ಪ್ರಶ್ನೆ ಕೇಳಿದ್ರೆ ನನ್ನ ತಲೆ ಒಡ್ಡೋಗುತ್ತೆ?' ಅದಕ್ಕೆ ಅನಿತಾ ಯೋಚಿಸುತ್ತಿದ್ದುದು, 'ಬೊಂಬೆ ಒಡದ್ರೆ ಅಪ್ಪ ಜೋಡಿಸಿ ಕೊಡ್ತಾರೆ. ಅಮ್ಮನ ತಲೆ ಒಡೆದರೆ ಜೋಡಿಸೋದು ಯಾರು?'

ಒಂದು ಚಳಿಗಾಲದಲ್ಲಿ ಅಜ್ಜಿ ಮನೆಯಲ್ಲಿ ಅನಿತಾ ಹಾಜರ್. ಅವತ್ತು ರಾತ್ರಿ ಮಾತಾಡಿ ಮಾತಾಡಿ ಮಲಗೋ ಹೊತ್ತಿಗೆ, ಅರುಣಾ ಚಿಕ್ಕಮ್ಮ ಒಬ್ಬ ಕುಸ್ತಿಪಟುವಿನ ಕಥೆ ಹೇಳ್ತಾಯಿದ್ರು. ಚಾಮುಂಡಿ ಬೆಟ್ಟಾನ ಬೇಕಾದ್ರೆ ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗ್ತೀನಿ ಅಂತ ಅವನು ರಾಜರಿಗೆ ಸವಾಲು ಹಾಕಿದ್ನಂತೆ. ಆ ಕಥೆ ಮುಗಿಸೋ ಮೊದಲೇ ಅನಿತಾ ನಿದ್ದೆ ಹೋಗಿದ್ದಳು.

ಮರುದಿನ ಬೆಳಿಗ್ಗೆ ತೋಟದ ಸುತ್ತಮುತ್ತಲೆಲ್ಲಾ ದಟ್ಟವಾದ ಕಾವಳ ಮುತ್ತಿಕೊಂಡಿತ್ತು. ಚುಮುಚುಮು ಬೆಳಕು ಇದ್ದರೂ ಎದುರು ಬದುರು ಇರುವವರು ಕೂಡಾ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ತುಂಬಾ ಚಳಿಯಿತ್ತು. ಮಲಗಿದ್ದ ಅನಿತಾಳನ್ನ ಮೆಲ್ಲಗೆ ಎಬ್ಬಿಸಿದ ಅರುಣಾ ಚಿಕ್ಕಮ್ಮ 'ನಿನಗೇನೋ ತೋರಿಸ್ತೀನಿ ಬಾ' ಅಂತ ಮನೆಯ ತಾರಸಿಗೆ ಕರೆದುಕೊಂಡು ಹೋದಳು.

'ಹೇಗಿದೆ ಅನಿತಾ?' ಅರುಣಾ ಕೇಳಿದಳು. ಸುತ್ತಮುತ್ತಾ ಚಿಲಿಪಿಲಿಗುಟ್ಟುವ ಹಕ್ಕಿಗಳ ದನಿ ಕೇಳುತ್ತಾ, ಕಣ್ಣು ಕಿರಿದು ಮಾಡಿಕೊಂಡು ಆ ಕಡೆ ಈ ಕಡೆ ನೋಡುತ್ತಾ, ನಡುಗುತ್ತಾ, ಅನಿತಾ 'ಚಳಿಚಳಿ...' ಎಂದು ಹೊದಿಕೆಯನ್ನು ಬಿಗಿ ಮಾಡಿಕೊಂಡಳು.

ಇದ್ದಕ್ಕಿದ್ದಂತೆ ಅನಿತಾ, 'ಚಿಕ್ಕಮ್ಮಾ ಬೆಟ್ಟ ಎಲ್ಲಿ? ಅಯ್ಯೋ! ಬೆಟ್ಟ ಎಲ್ಲಿ ಹೋಯ್ತು?'